**ದಿ:28.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲು:-**ಪ್ರತಿವಾದಿ ಪರ ಶ್ರೀ.**K.M.B.,** ವಕೀಲರಿಂದ:-

ದಾವಾ ಆಸ್ತಿ ಮೂಲತಃ ಸರ್ಕಾರದ ಸ್ವತ್ತು ಇರುತ್ತದೆ ಎಂದರೆ ಸರಿ. ಸದರಿ ದಾವಾ ಆಸ್ತಿಯನ್ನು ಈ ಹಿಂದೆ ತೋರಣಗಟ್ಟೆ ಪಂಚಾಯಿತಿಯವರು ಹರಾಜು ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯು ದಾವೆಯಲ್ಲಿ ಏನು ತಕರಾರು ಸಲ್ಲಿಸಿರುತ್ತಾರೆ ಎಂದು ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ಪ್ರತಿವಾದಿಯವರ ಅಜ್ಜ ಹನುಮಂತಪ್ಪ ತಂದೆ ಲೇಟ್ ಸಂಜೀವಪ್ಪ ಇರುತ್ತಾರೆ ಎಂದರೆ ಸರಿ. ಸದರಿ ಹನುಮಂತಪ್ಪರವರು ಜೀವಂತ ಇದ್ದ ಕಾಲದಲ್ಲಿ **1962-63** ರಲ್ಲಿ ಸಾರ್ವಜನಿಕ ಹರಾಜಿನ ಮೂಲಕ ತೆಗೆದುಕೊಂಡರು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪೂರ್ವ ದಿಕ್ಕಿನಲ್ಲಿ ನಮ್ಮ ಮನೆ ಇರುತ್ತದೆ ಎಂದರೆ ಸರಿ. ಪಶ್ಚಿಮ ದಿಕ್ಕಿಗೆ ರಸ್ತೆ ಇರುತ್ತದೆ ಎಂದರೆ ಸರಿ. ಉತ್ತರ ದಿಕ್ಕಿಗೆ ಓಬಣ್ಣ ಮನೆ ಇರುತ್ತದೆ ಎಂದರೆ ಸಾಕ್ಷಿ ರಸ್ತೆ ಇರುತ್ತದೆ ಎಂದು ಹೇಳುತ್ತಾರೆ, ದಕ್ಷಿಣಕ್ಕೆ ನಾಗೇಂದ್ರಪ್ಪ ಮತ್ತು ಭೀಮಪ್ಪರವರ ಮನೆ ಇರುತ್ತದೆ ಎಂದರೆ ಸರಿ. ಹಾರಾಜಿನ ನಂತರ ಪ್ರತಿವಾದಿರವರ ಅಜ್ಜರವರಿಗೆ ಪಂಚಾಯಿತಿ ದಾವಾ ಆಸ್ತಿ ಖಾತೆ ಬದಲಾವಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯ ಅಜ್ಜ ಜೀವಂತ ಇರುವ ಕಾಲದಲ್ಲಿ ಸ್ವಾಧೀನ ಇರುತ್ತಾರೆ ಎಂದರೆ ಸರಿಯಲ್ಲ. ಅವರು ಮರಣ ನಂತರ ಪ್ರತಿವಾದಿ ಸ್ವಾಧೀನ ಇರುತ್ತಾರೆ ಎಂದರೆ ಸರಿಯಲ್ಲ. ದಾವೆ ಸಲ್ಲಿಸುವ ಪೂರ್ವದಲ್ಲಿ ದಾವಾ ಆಸ್ತಿಯ ದಾಖಲೆಗಳು ಯಾರ ಹೆಸರಿನಲ್ಲಿ ಇರಲಿಲ್ಲ. ದಾವಾ ಆಸ್ತಿ ಖಾಲಿ ಜಾಗ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿ ಪೂರ್ವದಲ್ಲಿ ಇರುವ ನಮ್ಮ ಆಸ್ತಿಯು ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಸದರಿ ಆಸ್ತಿಯನ್ನು ನಾವು ಪಾಲು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಖಾತಾ ನಂ:**54/1** ಮತ್ತು **54/2** ಇರುತ್ತದೆ ಎಂದರೆ ಸರಿ. ದಾವಾ ಆಸ್ತಿ ನಮ್ಮದೇ ಎಂದು ತೋರಿಸಲು ನಾವು

ನ್ಯಾಯಾಲಯಕ್ಕೆ ಕಂದಾಯ ರಶೀದಿ ನೀಡಿರುತ್ತೇನೆ. ಕಂದಾಯವನ್ನು ನಮ್ಮ ತಂದೆ ವಾದಿ ನಂ:1 ರವರು ಮಾಡಿರುತ್ತಾರೆ. ನಿಪಿ8 ದಾಖಲೆಯು ದಿ:19.11.1990 ಕ್ಕೆ ಸಂಬಂಧಿಸಿದ್ದು ಇರುತ್ತದೆ ಎಂದರೆ ಸರಿ. ನಿಪಿ9 ಮತ್ತು 10 ರಶೀದಿಗಳಲ್ಲಿ ಮನೆ ಕಂದಾಯ ಎಂದು ನಮೂದು ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಹಿಂದೆ ಮನೆ ಕಂದಾಯ ಎಂದು ನೀಡುತ್ತಿದ್ದರು ಎಂದು ಹೇಳುತ್ತಾರೆ. ನಿಪಿ12 ಕಚ್ಚಾ ನಕಾಶೆಯಲ್ಲಿ ರಸ್ತೆ ಪಕ್ಕದ 8 X 8 ಗಜ ಎಂದು ತೋರಿಸುವ ಜಾಗ ಗ್ರಾಮ ಠಾಣಾ ಸೇರಿರುತ್ತದೆ. ನಿಪಿ**12** ರಲ್ಲಿ ನಮೂದಾಗಿರುವ ವಿವಾದಿತ ಜಾಗ ಎಂದು ಇರುವ ಆಸ್ತಿಗೆ ದಾಖಲೆಗಳನ್ನು ನೀಡಿರುವುದಿಲ್ಲ. ನಮ್ಮ ಮನೆಯ ಪೂರ್ವಕ್ಕೆ:ರಾಮಾಂಜನೇಯ ಬಿನ್ ರಾಮಣ್ಣರವರ ಮನೆ ಇರುತ್ತದೆ. ನಿಪಿ12 ಕಚ್ಚಾ ನಕಾಶೆಯಂತೆ ಪ್ರಸ್ತುತವಾಗಿ ದಾವಾ ಆಸ್ತಿ ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಮಗೆ ಸೇರಿದ 54/1 ಮತ್ತು 54/2 ರ ದಾಖಲೆಗಳನ್ನು ಹಾಜರುಪಡಿಸಿ ಪ್ರತಿವಾದಿಗೆ ಸೇರಿದ ದಾವಾ ಆಸ್ತಿಯನ್ನು ಕಬಳಿಸಲು ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಖಾತಾ ನಂ:54/1 ಮತ್ತು 54/2 ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇರುವುದಿಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು**.)**

ಓ ಹೇ ಕೇ ಸರಿ ಇದೆ

ಸಹಿ

**ಸಿವಿಲ್ ನ್ಯಾಯಾಧೀಶರು, ಜಗಳೂರು**